Total No. of Questions : 41

**Code No. 22**

**June, 2008**

# ECONOMICS

Time : 3 Hours 15 Minutes

Max. Marks : 100

( Kannada Version )

***ಸೂಚನೆಗಳು*** : i) ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ಅಂಚಿನಲ್ಲಿ ಬರೆಯಿರಿ.

ii) ಪ್ರತಿ ಪ್ರಶ್ನೆಗೂ ಉತ್ತರವು ನಿರಂತರವಾಗಿರಬೇಕು.

## ಭಾಗ – ಎ

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ : $10 \times 1 = 10$

1) ಆರ್ಥಿಕ ಬೆಳವಣಿಗೆ ಎಂದರೇನು ?

2) ಲಿಂಗ ಸಂಯುಕ್ತತೆ ಎಂದರೇನು ?

3) ಒಣ ಬೇಸಾಯದ ಅರ್ಥವನ್ನು ತಿಳಿಸಿ.

4) 'ರೋಗಗ್ರಸ್ಥ ಉದ್ದಿಮೆ'ಯನ್ನು ವ್ಯಾಖ್ಯಾನಿಸಿ.

5) 'ಬಾಲ ಕಾರ್ಮಿಕತೆ'ಯ ಅರ್ಥವನ್ನು ತಿಳಿಸಿ.

6) ಕರೆ ಹಣ ಮಾರುಕಟ್ಟೆ ಎಂದರೇನು ?

7) GATT ಅನ್ನು ವಿಸ್ತರಿಸಿ.

8) ಆಮದು ಬದಲಿ ಸರಕನ್ನು ವ್ಯಾಖ್ಯಾನಿಸಿ.

9) ಕೊರತೆಯ ಮುಂಗಡ ಪತ್ರ ಎಂದರೇನು ?

10) ಯೋಜನಾ ಆಯೋಗದ ಈಗಿನ ಉಪಾಧ್ಯಕ್ಷರು ಯಾರು ?

## ಭಾಗ - ಬಿ

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಹತ್ತು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ : $10 \times 2 = 20$

11) ಪ್ರಾಥಮಿಕ ದತ್ತಾಂಶಗಳು ಮತ್ತು ಮಾಧ್ಯಮಿಕ ದತ್ತಾಂಶಗಳ ನಡುವಿನ ವ್ಯತ್ಯಾಸ ತಿಳಿಸಿ.

12) ಕೋಷ್ಟಕದ ಪ್ರಮುಖ ಅಂಗಗಳನ್ನು ತಿಳಿಸಿ.

13) ಭೂಸವೆತದ ಯಾವುದಾದರೂ ನಾಲ್ಕು ಪರಿಣಾಮಗಳನ್ನು ತಿಳಿಸಿ.

14) ಹನಿ ನಿರಾವರಿಯ ಪ್ರಯೋಜನಗಳನ್ನು ತಿಳಿಸಿ.

15) ಭಾರತದ ಕೈಗಾರಿಕೆಗಳನ್ನು ವರ್ಗೀಕರಿಸಿ.

16) ಭಾರತದ ಯಾವುದಾದರೂ ನಾಲ್ಕು ಬೃಹತ್ ಕೈಗಾರಿಕೆಗಳನ್ನು ಹೆಸರಿಸಿ.

17) ಸ್ವಸಹಾಯ ಗುಂಪುಗಳೆಂದರೇನು ?

18) ರೈಲ್ವೆ ಗೇಜ್‌ಗಳನ್ನು ಹೇಗೆ ವಿಂಗಡಿಸಲಾಗಿದೆ ?

19) ಅಸಾಂಪ್ರದಾಯಿಕ ಶಕ್ತಿಯ ಯಾವುದಾದರೂ ನಾಲ್ಕು ಮೂಲಗಳನ್ನು ತಿಳಿಸಿ.

20) 'ಬ್ಯಾಂಕ್ ದರ ನೀತಿ' ಎಂದರೇನು ?

21) ಬೌದ್ಧಿಕ ಆಸ್ತಿಯ ಹಕ್ಕುಗಳು ಎಂದರೇನು ?

22) ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಪ್ರಮುಖ ಕಾರ್ಯಗಳನ್ನು ತಿಳಿಸಿ.

## ಭಾಗ - ಸಿ

III. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎಂಟು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ : $8 \times 5 = 40$

23) ಅವಿಶ್ರಾಂತ ಆರ್ಥಿಕಾಭಿವೃದ್ಧಿ ಎಂದರೇನು ? ಅದರ ಲಕ್ಷಣಗಳೇನು ?

24) ಸಾರ್ವಜನಿಕ ವಲಯದ ಪ್ರಮುಖ ಸುಧಾರಣೆಗಳನ್ನು ತಿಳಿಸಿ.

25) ಒಂದು ಸಾಮಾಜಿಕ ಮೂಲ ಸೌಕರ್ಯವಾಗಿ ಶಿಕ್ಷಣದ ಮಹತ್ವವನ್ನು ವಿವರಿಸಿ.

26) ಭಾರತದಲ್ಲಿ ಕೃಷಿ ಮಾರುಕಟ್ಟೆಗಳ ನ್ಯೂನತೆಗಳನ್ನು ಹೋಗಲಾಯಿಸಲು ಕೈಗೊಂಡ ಕ್ರಮಗಳನ್ನು ತಿಳಿಸಿ.

27) ಭಾರತದಲ್ಲಿ ಭೂ-ಬಳಕೆ ಮಾದರಿಯನ್ನು ತೋರಿಸುವ ಒಂದು ಪಟ್ಟಿಯನ್ನು ತಯಾರಿಸಿ.

28) ಭಾರತದ ಸಣ್ಣ ಪ್ರಮಾಣದ ಉದ್ದಿಮೆಗಳ ಸಮಸ್ಯೆಗಳನ್ನು ವಿವರಿಸಿ.

29) ಭಾರತದಲ್ಲಿ ಕೃಷಿ ಕಾರ್ಮಿಕರ ಸಮಾಜಿಕ-ಆರ್ಥಿಕ ಸ್ಥಾನಮಾನಗಳನ್ನು ವಿವರಿಸಿ.

30) ಭಾರತದ ಕಾರ್ಮಿಕ ಸಂಘಗಳ ನ್ಯೂನತೆಗಳೇನು ?

31) ಸಂಪರ್ಕ ಎಂದರೇನು ? ದೂರ-ಸಂಪರ್ಕದ ವಿವಿಧ ಸಾಧನಗಳು ಯಾವುವು ?

32) ಒಂದು ಆರ್ಥಿಕ ಮೂಲ ಸೌಕರ್ಯವಾಗಿ ರಸ್ತೆ ಸಾರಿಗೆಯ ಮಹತ್ವವನ್ನು ವಿವರಿಸಿ.

33) ವಿತ್ತೀಯ ನೀತಿಗಳ ಅರ್ಥ ಮತ್ತು ಉದ್ದೇಶಗಳನ್ನು ತಿಳಿಸಿ.

34) 9ನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನು ವಿವರಿಸಿ.

## ಭಾಗ - ಡಿ

IV. ಈ ಕೆಳಗಿನವುಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಲವತ್ತು ವಾಕ್ಯಗಳಲ್ಲಿ ಉತ್ತರಿಸಿ : $2 \times 10 = 20$

35) ಬಡತನ ನಿರ್ಮೂಲನೆ ಮತ್ತು ಉದ್ಯೋಗ ಸೃಷ್ಟಿಗಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿ.

36) ಭಾರತದಲ್ಲಿ ವಾಣಿಜ್ಯ ಬ್ಯಾಂಕ್‌ಗಳ ಬೆಳವಣಿಗೆ ಮತ್ತು ರಚನೆಯನ್ನು ವಿವರಿಸಿ.

37) ಭಾರತದ ಪ್ರಮುಖ ರಫ್ತುಗಳೇನು ? ಸರ್ಕಾರ ಕೈಗೊಂಡಿರುವ ರಫ್ತು ವೃದ್ಧಿ ಕ್ರಮಗಳನ್ನು ವಿವರಿಸಿ.

38) ಕೇಂದ್ರ ಸರ್ಕಾರದ ಆದಾಯದ ಮೂಲಗಳನ್ನು ವಿವರಿಸಿ.

## ಭಾಗ – ಇ

V. ಈ ಕೆಳಗಿನ ಯೋಜನೆ ಹಾಗೂ ನಿಯೋಜನೆ ಆಧಾರಿತ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : $2 \times 5 = 10$

39) ನೀವು ಕಂಡ ಮಳೆ ನೀರು ಕೊಯ್ಲಿನ ಯೋಜನೆಯ ಬಗ್ಗೆ ಒಂದು ವರದಿ ತಯಾರಿಸಿ.

40) ಯಾವುದಾದರೂ ಹತ್ತು ರೈಲ್ವೆ ವಲಯಗಳು ಮತ್ತು ಅವುಗಳ ಕೇಂದ್ರ ಸ್ಥಾನವನ್ನು ತೋರಿಸುವ ಒಂದು ಪಟ್ಟಿ ತಯಾರಿಸಿ.

41) ಭಾರತದಲ್ಲಿ ಸಕ್ಕರೆಯ ಉತ್ಪಾದನೆಯನ್ನು ತೋರಿಸುವ ಕೆಳಕಂಡ ದತ್ತಾಂಶಗಳನ್ನು ಬಳಸಿ ಒಂದು ಸರಳ ಸ್ತಂಭ ರೇಖಾ ಚಿತ್ರವನ್ನು ರಚಿಸಿ :

| ***ವರ್ಷ*** | 1970-71 | 1975-76 | 1980-81 | 1985-86 | 1990-91 | 2000-01 |
|---|---|---|---|---|---|---|
| ***ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)*** | 12 | 20 | 31 | 35 | 38 | 42 |